KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ಸಂಯುಕ್ತ ಕರ್ನಾಟಕ ದಿನಾಂಕ : DATE 03/1/2020

# ಪೌರ ಶಾಸನ ವಿರೋಧಕ್ಕೆ ಕೆಂಡ

## ಪಾಕ್ ಮುಖವಾಡಕ್ಕೆ ಗತಿ

- ಸಂಸತ್ತಿನ ನಿರ್ಣಯದ ವಿರುದ್ಧವೇ ಹೋರಾಟ
- ಕಳೆದ 70 ವರ್ಷಗಳಲ್ಲಿ ಪಾಕ್‌ನಲ್ಲಿ ದಬ್ಬಾಳಿಕೆ
- ದಬ್ಬಾಳಿಕೆಗೆ ಒಳಗಾದ ಧರ್ಮದವರಿಗೆ ರಕ್ಷಣೆಗೆ ಕಾಯ್ದೆ
- ರಾಮಮಂದಿರ ನಿರ್ಮಾಣಕ್ಕೆ ಕೂಡಿ ಬಂದ ಕಾಲ
- ಭಯೋತ್ಪಾದನೆ ವಿಷಯದಲ್ಲಿ ನಮ್ಮ ನೀತಿ ಬದಲು

ತುಮಕೂರು: ಪೌರತ್ವ ಕಾಯ್ದೆಯನ್ನು ವಿರೋಧಿಸುತ್ತಿರುವ ಕಾಂಗ್ರೆಸ್ ಹಾಗೂ ಸಮಾನ ಮನಸ್ಕ ಪಕ್ಷಗಳು ಸಂಸತ್ತಿನ ನಿರ್ಣಯದ ವಿರುದ್ಧವೇ ಹೋರಾಡುತ್ತಿವೆ ಎಂದು ಆರೋಪಿಸಿರುವ ಪ್ರಧಾನಿ ನರೇಂದ್ರಮೋದಿ ಅದರ ಬದಲಾಗಿ ಕಳೆದ 70 ವರ್ಷಗಳಿಂದ ಅಲ್ಪಸಂಖ್ಯಾತರ ಮೇಲೆ ದಬ್ಬಾಳಿಕೆ ನಡೆಸಿರುವ ಪಾಕಿಸ್ತಾನದ ಧೋರಣೆ ವಿರುದ್ಧ ಹೋರಾಡಿ ಎಂದು ಸವಾಲು ಹಾಕಿದ್ದಾರೆ.

ಗುರುವಾರ ಇಲ್ಲಿನ ಸಿದ್ಧಗಂಗಾ ಮಠಕ್ಕೆ ಆಗಮಿಸಿ ಲಿಂಗೈಕ್ಯ ಶ್ರೀ ಶಿವಕುಮಾರ ಸ್ವಾಮೀಜಿಗಳ ಗದ್ದುಗೆಗೆ ಗೌರವ ಸಲ್ಲಿಸಿ ಅವರ ಜೀವನಗಾಥೆ ಬಿಂಬಿಸುವ ವಸ್ತು ಸಂಗ್ರಹಾಲಯಕ್ಕೆ ಶಿಲಾನ್ಯಾಸ ಮಾಡಿ ಮಾತನಾಡಿದ ಮೋದಿ ಪೌರತ್ವ ಕಾಯ್ದೆಯನ್ನು ಬಲವಾಗಿ ಸಮರ್ಥಿಸಿಕೊಂಡು ವಿರೋಧಿಗಳಿಗೆ ಮಾತಿನ ಚಾಟಿ ಬೀಸಿದರು. ಇದೇ ಸಂದರ್ಭದಲ್ಲಿ ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ನಿರ್ಮಾಣಕ್ಕೆ ಕಾಲ ಕೂಡಿ ಬಂದಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಸಂಸತ್ತಿನಲ್ಲಿ ಸುದೀರ್ಘ ಚರ್ಚೆಯ ಮೂಲಕ ಅಂಗೀಕಾರ ಪಡೆದ ಪೌರತ್ವ ಕಾಯ್ದೆ ವಿರುದ್ಧ ಹುಯಿಲೆಬ್ಬಿಸುತ್ತಿರುವವರು ಸಂಘರ್ಷವನ್ನು ನಡೆಸುತ್ತಿದ್ದಾರೆ. ನಿಮಗೆ ಹೋರಾಡಬೇಕು ಅಂತಿದ್ದರೆ, ಪಾಕಿಸ್ತಾನ ತನ್ನ ನೆಲದಲ್ಲಿ ಇದುವರೆಗೆ ಧಾರ್ಮಿಕ ಅಲ್ಪಸಂಖ್ಯಾತರ ಮೇಲೆ ನಡೆಸಿದ ದಬ್ಬಾಳಿಕೆ ವಿರುದ್ಧ ಹೋರಾಟ ನಡೆಸಿ. ಜಾಗತಿಕ ಮಟ್ಟದಲ್ಲಿ ಆ ದೇಶದ ಬಣ್ಣ ಬಯಲು ಮಾಡಿ, ಅದನ್ನು ಬಿಟ್ಟು ಆ ದೇಶದ ಪರವಾಗಿ ಏಕೆ ಮಾತನಾಡುತ್ತಿದ್ದೀರಿ ಎಂದು ಕೇಳಿದ್ದಾರೆ.

ಕಳೆದ 70 ವರ್ಷಗಳಲ್ಲಿ ಆ ದೇಶದಲ್ಲಿ ಧರ್ಮದ ಆಧಾರದ ಮೇಲೆ ದಬ್ಬಾಳಿಕೆ ನಡೆದಿದೆ. ಜೈನರು, ಸಿಖ್ಖರು, ಪಾರ್ಸಿಗಳ ಮೇಲೆ ದೌರ್ಜನ್ಯ ನಡೆದಿದೆ. ಆ ರೀತಿ ದೌರ್ಜನ್ಯದಿಂದ ಮಾತೃ ಭೂಮಿಗೆ ಓಡಿ ಬಂದವರ ರಕ್ಷಣೆಗಾಗಿ ನಾವು ಈ ಕಾಯ್ದೆ ತಂದಿದ್ದೇವೆ. ಇದರ ವಿರುದ್ಧ ಅಪಪ್ರಚಾರ ಮಾಡುವುದನ್ನು ನಿಲ್ಲಿಸಿ ಎಂದು ವಿರೋಧಿಗಳಿಗೆ ಮೋದಿ ತಾಕೀತು ಮಾಡಿದರು.

21ನೇ ಶತಮಾನದ ಮೂರನೇ ದಶಕದಲ್ಲಿ ನವ ಭಾರತ ನಿರ್ಮಾಣಕ್ಕೆ ಬಲವಾದ ಅಡಿಪಾಯ ಹಾಕಿದ್ದೇವೆ. ದೇಶದಲ್ಲಿ ಬಯಲು ಮುಕ್ತ ಶೌಚಾಲಯ ನಿರ್ಮಾಣ ಮಾಡಿದ್ದೇವೆ. ಬಡವರ ಮನೆ ಅಡಿಗೆ ಮನೆಗಳು ಹೊಗೆ ರಹಿತವಾಗಿವೆ. ರೈತರ ಬ್ಯಾಂಕ್ ಖಾತೆಗಳಿಗೆ ನೇರ ನಗದು ಹಾಕುವ ಕಾರ್ಯಕ್ರಮ ಜಾರಿಗೆ ತಂದಿದ್ದೇವೆ. ಎಲ್ಲರಿಗೂ ಆರೋಗ್ಯ ಸೇವೆ ನೀಡಲು ಮುಂದಾಗಿದ್ದೇವೆ ಎಂದು ವಿವರಿಸಿದರು.

ಜಮ್ಮು-ಕಾಶ್ಮೀರದ ವಿಶೇಷ ಸ್ಥಾನಮಾನ ರದ್ದು ಮಾಡಿದ ಕ್ರಮವನ್ನು ಸಮರ್ಥಿಸಿಕೊಂಡ ಪ್ರಧಾನಿ ಭಯೋತ್ಪಾದನೆ ವಿಷಯದಲ್ಲಿ ಭಾರತದ ನೀತಿ ಬದಲಾಗಿದೆ. ಕಾಶ್ಮೀರದಲ್ಲಿ ಸದಾ ನೆಲೆಯಾಗಿದ್ದ ಅಸಿಸ್ಥಿತ ವಾತಾವರಣ ದೂರವಾಗಿದೆ. ಅಲ್ಲಿ ನೆಮ್ಮದಿಯ ಬದುಕು ಆರಂಭ ಆಗಿದೆ ಎಂದರು.

21 ನೇ ಶತಮಾನದ ಮೂರನೇ ದಶಕ ಭವ್ಯ ಭಾರತಕ್ಕೆ ಭದ್ರ ಅಡಿಪಾಯ ಹಾಕಿದೆ. ಇದರಲ್ಲಿ ಯುವಕರು, ಆದಿವಾಸಿಗಳು, ಶೋಷಿತರು, ಬಡವರ ಒಡಲಾಳದ ಕನಸಿದೆ. ಅವರ ಆಕಾಂಕ್ಷೆಗಳನ್ನು ಪೂರ್ತಿಗೊಳಿಸಲು ನಾವು ಬದ್ಧರಾಗಿದ್ದೇವೆ ಎಂದು ಪ್ರಧಾನಿ ಹೇಳಿದರು.

ಹಾಲಿ ಪೀಠಾಧಿಪತಿಗಳಾದ ಶ್ರೀ ಸಿದ್ದಲಿಂಗ ಸ್ವಾಮೀಜಿ ಅವರು ಮೋದಿ ಅವರಿಗೆ ಬೆಳ್ಳಿಯ ಮೂರ್ತಿ ನೀಡಿ ಗೌರವಿಸಿದರು. ಮುಖ್ಯಮಂತ್ರಿ ಯಡಿಯೂರಪ್ಪ, ಕೇಂದ್ರ ಸಚಿವರಾದ ಡಿ.ವಿ.ಸದಾನಂದಗೌಡ, ಪ್ರಹ್ಲಾದ್ ಜೋಶಿ, ಸಚಿವರಾದ ವಿ.ಸೋಮಣ್ಣ, ಜೆ.ಸಿ.ಮಾಧುಸ್ವಾಮಿ ಮುಂತಾದವರು ಉಪಸ್ಥಿತರಿದ್ದರು.



**ಕೊರಳಲ್ಲಿ ರುದ್ರಾಕ್ಷಿ-ಹಣೆಯಲ್ಲಿ ವಿಭೂತಿ**

ಲಿಂಗೈಕ್ಯ ಶ್ರೀಗಳ ಗದ್ದುಗೆಗೆ ಆರತಿ ಬೆಳಗಿ ಗೌರವ ಸಲ್ಲಿಸಿದ ಮೋದಿ ನಂತರ ಹಣೆಗೆ ವಿಭೂತಿ ಧರಿಸಿದರು. ಅವರು ಕೊರಳಿನಲ್ಲಿ ಧರಿಸಿದ್ದ ರುದ್ರಾಕ್ಷಿ ಮಾಲೆ ಸಹ ಗಮನ ಸೆಳೆಯಿತು.